(*d*) whether the proposed Commission will also go into the question of considering the deversion of Godavari river water to Krishna river in order to make up the loss of water consequent on the giving of more water to Andhra from Krishna river ;

(*e*) whether Government have any alternative proposal in this behalf ?

Sri VEERENDRA PATIL (Chief Minister).—

(*a*) The Government of India have agreed to refer this question to a tribunal.

(*b*) Setting up of a single commission has been insisted upon. Final decision in the matter by the Government of India is still not known.

(*c*) Upper-Krishna Project Stage-I has been approved by the Government of India in 1963 and the Project is under construction.

(*d*) The question of diversion of Godavari waters to Krishna in the lower Krishna basin has to be looked into by the Commission. This fact has been impressed to the Government of India.

(*e*) The question is not clear.

ಶ್ರೀ ಎಸ್. ಎಂ. ಗುರೆಡ್ಡಿ.—ಕೇಂದ್ರ ಸರ್ಕಾರದವರು ಆ ನದೀ ನೀರಿನ ಆಯೋಗದ ನೇಮಕದ ವಿಚಾರದಲ್ಲಿ ಕೃಷ್ಣಾನದಿ ನೀರಿಗೇ ಒಂದು ಗೋದಾವರಿ ನೀರಿಗೇ ಒಂದು ಎಂದು ಹೇಳಿರ ತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

† ಶ್ರೀ ವೀರೇಂದ್ರ ಪಾಟೀಲ್.—ಆ ವಿಚಾರ ಲಿಖಿತಮೂಲಕವಾಗಿನ್ನೂ ನಮಗೆ ಬಂದಿಲ್ಲ. ಪತ್ರಿಕೆಗಳಲ್ಲೇನೋ ಆ ಪಾರ್ಲಿಯಮೆಂಟಿನಲ್ಲಿ ಆ ವಿಷಯ ಚರ್ಚೆ ಆಯಿತು ಎಂಬುದನ್ನು ಮಾತ್ರ ಕೇಳಿದ್ದೇನೆ.

ಶ್ರೀ ನದಾಶಿವಪ್ಪ ಪಾಟೀಲ್.—ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು 1963ರಲ್ಲಿಯೇ ನಿರ್ಣಯವಾಗಿದೆ. ಇದು ಚೆಕ್ಕಿಕರ್ ಅವರ ಅಭಿಪ್ರಾಯವೋ ಅಥವಾ ಪೊಲಿಟಿಕರ್ ಅವರ ಅಭಿಪ್ರಾಯವೋ ?

ಶ್ರೀ ವೀರೇಂದ್ರ ಪಾಟೀಲ್.—ಅಪ್ಪರ್ ಕೃಷ್ಣಾ ಸ್ಪೇಜ್ ಒಂದನ್ನು ಕೇಂದ್ರ ಸರ್ಕಾರದವರು 1963ರಲ್ಲಿ ಮಂಜೂರು ಮಾಡಿದ್ದಾರೆ. ಸ್ಪೇಜ್ ಒಂದು ಏನಿದೆಯೆಂಬುದನ್ನು ಪೂರ್ತಿ ನೋಡದೆ ಈಗ ಹೇಳುವ ದಕ್ಕಾಗುವುದಿಲ್ಲ.

Murder Cases in Kudligi and Sandur Taluks

750. Sri M. M. J. SADYOJATHA (Kudligi).—

Will the Chief Minister be pleased to state :—

(*a*) the number of murders that took place during the period from June 1968 to January 1969 in Kudligi Taluk and Chornur Firka in Sandur taluk ;

(*b*) the number of the cases detected ;

(*c*) the number of them charge-sheeted ;

(*d*) the number of cases investigated by the regular police ;

(*e*) the number of cases investigated and detected by the C. I. D. ?

Sri VEERENDRA PATIL (Chief Minister).—

(*a*) Three.

(*b*) Two.

(*c*) One.

(*d*) Two.

(*e*) One.

ಶ್ರೀ ಎಂ. ಎಂ. ಜೆ. ನಡ್ಯೋಜಾತ.—ಕೂಡ್ಲಿಗಿ ತಾಲ್ಲೂಕಿನಲ್ಲಿ ಉಂಟಾದ ಕೊಲೆಗಳ ಸಂಬಂಧದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ವೀರೇಂದ್ರ ಪಾಟೀಲ್.—ಮೂರು ಕೊಲೆಗಳು ಆಗಿವೆಯೆಂದು ವರದಿಯಾಗಿದೆ. ಎಷ್ಟು ಕೊಲೆಗಳು ಆಗಿವೆಯೋ ಅವುಗಳ ಬಗ್ಗೆ ಪೋಲೀಸಿನವರು ಸಾಧ್ಯವಾದಷ್ಟು ಕ್ರಮವನ್ನು ತೆಗೆದುಕೊಂಡು ಯಾರು ಕೊಲೆ ಮಾಡಿದ್ದಾರೋ ಅವರನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಇಷ್ಟು ಕೇಸುಗಳ ಪೈಕಿ ಯಾವುದಾದರೂ ಬಳ್ಳಾರಿ ಸೆಷನ್ಸ್ ಜಡ್ಜ್ ಕೋರ್ಟಿದಲ್ಲಿ ಡಿಸ್‌ಚಾರ್ಜ್ ಆಗಿದೆಯೇ ? ಅಥವಾ ಯಾವುದಾದರೂ ಕನ್‌ವಿಕ್ಷನ್ ಆಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಮೂರು ಕೇಸುಗಳ ಪೈಕಿ ಬಹುಶಃ ಒಂದು ಕೇಸು ಬಳ್ಳಾರಿ ಸೆಷನ್ಸ್ ಜಡ್ಜ್ ಕೋರ್ಟಿನಲ್ಲಿ ನಡೆದು ಅಕ್ವಿಟ್ ಆಗಿದೆಯೆಂದು ನನಗೆ ಗೊತ್ತಾಗಿದೆ.

Mr. SPEAKER.—Question hour is over. Now Short Notice Question No. 40 may be taken up.

SHORT NOTICE QUESTION AND ANSWER

Rehabilitation of Ceylonese in the State

40. Sri VATAL NAGARAJ (Chickpet).—

Will the Chief Minister be pleased to state :—

(*a*) whether the Minister of State for Food and Civil Supplies has stated recently that ten thousand people coming from Ceylon will be rehabilitated in Mysore State in Mangalore District;

(*b*) if so, whether the Government have visualised the difficulties to be faced by the people of this State in that behalf ?

Sri VEERENDRA PATIL (Chief Minister).—

(*a*) No.

(*b*) Does not arise.

ಶ್ರೀ ವಾಟಾಳ್ ನಾಗರಾಜ್.—(ಅ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ವೆಂದು ಹೇಳಿದೆ. ಒಂದು ಪತ್ರಿಕೆಯಲ್ಲಿ ಆ ರೀತಿ ವರದಿ ಬಂದಿರುವುದು ನಿಜವಲ್ಲವೇ ? ಯಾರೂ ಬರುವುದಿಲ್ಲವೆಂದು ನೀವು ಹೇಳುತ್ತೀರಿ. ಅವರು ಬರುವ ಉದ್ದೇಶವಾದರೂ ಇದೆಯೇ ?